ಗಣೇಶ ಎಂ. ಪೈ, ಬೆಂಗಳೂರು

*‘ಹೀಗಾಗುತ್ತೇಂತ ನನಗೆ ಮೊದಲೇ ಗೊತ್ತಿತ್ತು ಕಣ್ರೀ’ ಎಂದು ಮಾತುಮಾತಿಗೆ ಕಿಚಾಯಿಸುವ ನನ್ನ ಮೇಲಧಿಕಾರಿಗೆ ಏನೆಂದು ಉತ್ತರಿಸಲಿ?*



ಸಂಬಳಕ್ಕೆ ದುಡಿಯುವುದನ್ನು ಬಿಟ್ಟು ಜೋತಿಷ್ಯಾಲಯ ಆರಂಭಿಸಿ; ಒಳ್ಳೆ ಭವಿಷ್ಯ ಇದೆ ಎನ್ನಿ.

ಟಿ.ಎಂ. ಮಾನಪ್ಪ, ಶಿವಮೊಗ್ಗ

*ತುಂಡುಡುಗೆಯನ್ನು ಯಾವ ದೃಷ್ಟಿಯಲ್ಲಿ ಮೆಚ್ಚಬಹುದು?*

ಬಡವರಿಗಿಲ್ಲದ ಬಟ್ಟೆ ತಮಗೂ ಬೇಡವೆನ್ನುವ ತ್ಯಾಗಮನೋಭಾವಕ್ಕೆ!

ಪಿ. ನಾಗೇಂದ್ರಪ್ಪ, ಬೆಂಗಳೂರು

*ಸೊಸೆ ಎಂದರೆ ಸುಂದರವಾದ ಸಂಸಾರವನ್ನು ಛಿದ್ರಗೊಳಿಸಿ ಅಶಾಂತಿ ಉಂಟುಮಾಡುವ ಚಾಕಚಕ್ಯತೆ ಎಂದರೆ ತಪ್ಪೆ?*

ಚಾಕು ಎಂದರೆ ಕೊಲೆ ಮಾಡಲು ಬಳಸುವ ಸಾಧನ ಎಂದಂತಾಯಿತು.

ರಮೇಶ್, ಹನುಮನಾಳು

*‘ತಿಥಿ’ ಸಿನಿಮಾಕ್ಕೆ ಪ್ರಶಸ್ತಿಗಳು ಬಂದಿವೆ. ‘ನಾಮಕರಣ’ ಸಿನೆಮಾ ತೆಗೆದರೆ?*




ಒಳ್ಳೆಯದೇ. ಗೆದ್ದರೆ ಹೆಸರು ಬರುತ್ತದೆ; ಸೋತರೆ ನಾಮ!

ಕೆ. ಚಂದ್ರಶೇಖರ, ಕೋಣನಕುಂಟೆ

*ಅಯ್ಯಾ ರಾಮು, ನೀನು ಆ ರಾಮನೋ, ಗಿಣಿರಾಮನೋ?*

ಡುಮ್ಮಿಯಾಗಿಯೂ ಆರಾಮವಾಗಿರುವುದರಿಂದ ತೂಕಾರಾಮ.

ಎನ್. ಗೋಪಾಲರಾವ್, ಬೆಂಗಳೂರು

*ಥಿಯೇಟರಲ್ಲಿ ಪಕ್ಕ ಕುಳಿತಿದ್ದ ಹುಡುಗಿ ಹೊರಬಂದಾಗ ಒಂದು ರೂಪಾಯಿ ಕೈಗಿಟ್ಟು ‘ಚಾಕ್ಲೇಟ್ ಕೊಂಡು ತಿನ್ನು ಮರಿ’ ಎಂದಳಲ್ಲಾ, ಏಕೆ?*

ಭೇಷ್. ಸಭ್ಯವಾದ ವರ್ತನೆಗೆ ಸಿಕ್ಕ ತಾರೀಫು.

ಅಮೃತೇಶ್ವರ ತಂಡರ, ಅಣ್ಣಿಗೇರಿ

*ರಣರಂಗದಲ್ಲಿ ಭಗವಂತನಿಗೆ 18 ಅಧ್ಯಾಯಗಳ ಗೀತೆಯನ್ನು ಬೋಧಿಸುವಷ್ಟು ಕಾಲಾವಕಾಶವಿತ್ತೆ?*

ಪದಚ್ಛೇದ, ಅನ್ವಯಾರ್ಥ, ಸಾರಾಂಶ ಅಗತ್ಯವಿರದ ಸಂಸ್ಕೃತವನ್ನರಿತ ಇಬ್ಬರದೂ ಶ್ಲೋಕಕ್ಕೆ 4 ಸೆಕೆಂಡಿನಂತೆ 44 ನಿಮಿಷ; ಸಮಯ ಇತ್ತು.

ಮೊಳಕಾಲ್ಮೂರು ಸುರೇಶ, ಬಳ್ಳಾರಿ

*ಅಲ್ರಿಯಪ್ಪೋ, ಎಲ್ಲರೂ ಮಾಡುವುದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ. ಆದರೆ ಹೊಟ್ಟೆಯೇ ಇರದಿದ್ದರೆ?*

ಸುಂದರವಾದ, ವೃತ್ತಾಕಾರದ, ಬೊಜ್ಜುಬೊಜ್ಜಿನ ಹೊಟ್ಟೆ ಬರಿಸಿಕೊಳ್ಳುವುದಕ್ಕಾಗಿ.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ

*ಮಾವು, ಸೇಬು, ಮುಂತಾದ ಹಣ್ಣುಗಳನ್ನು ರುಚಿ ನೋಡಲು ಸ್ಯಾಂಪಲ್ ಕೇಳುವಂತೆ ಬಾಳೆಹಣ್ಣನ್ನು ಏಕೆ ಕೇಳುವುದಿಲ್ಲ?*

ಕೇಳಿದರಂತೆ. ’ಯಾವ ಕೋತಿಗೂ ಕೊಡೋದಿಲ್ಲ’ ಅಂದ್ಬಿಟ್ರಂತೆ!

ಸುಮಾ ರಮೇಶ್, ಹಾಸನ

*ವಿಕೃತಿಗೆ ಅಭಿಮಾನಿಗಳು ಹೆಚ್ಚಾಗುತ್ತಿರುವರಲ್ಲಾ, ಏಕೆ?*

ಗುರುತ್ವಾಕರ್ಷಣೆಯ ನಿಯಮ; ಏರುವಿಕೆಗೆ ವಿರೋಧ; ಬೀಳುವಿಕೆಗೆ ಆಹ್ವಾನ.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ

*ಬ್ಯಾಲೆಟ್‌ಗೂ, ಬುಲೆಟ್‌ಗೂ ಏನು ವ್ಯತ್ಯಾಸ?*

ಗುಂಡು ಹಾರಿಸಲು ಬುಲೆಟ್; ಗುಂಡು ಏರಿಸಲು ಬ್ಯಾಲೆಟ್.

ಸವಿತಾ ರವಿ, ಸುಟ್ಟಟ್ಟಿ

*ಕುತೂಹಲಕ್ಕೂ, ಉತ್ಸಾಹಕ್ಕೂ ಅಂತರವೇನು?*

ಇನ್ವಿಜಿಲೇಟರ್ ಕಾಪಿ ಮಾಡಲು ಬಿಡುವನೋ ಇಲ್ಲವೋ ಎನ್ನುವುದು ಕುತೂಹಲ; ಬಿಡುವನೆಂದಾಗ ಇರುವುದು ಉತ್ಸಾಹ.

ಅನಂತಪದ್ಮನಾಭ ಹೆಚ್.ಎಮ್., ಮೈಸೂರು

*ವೈದ್ಯರ ತಪ್ಪುಗಳು ಹೂಳಲ್ಪಡುತ್ತವೆ; ವಕೀಲರ ತಪ್ಪುಗಳು ನೇಣಿಗೇರಿಸಲ್ಪಡುತ್ತವೆ. ಮೇಷ್ಟ್ರ ತಪ್ಪುಗಳು?*

ಟಿವಿ ನಿರೂಪಕ/ಕಿಯರಾಗಿ ಕನ್ನಡವನ್ನು ಇಂಚಿಂಚೂ ಕೊಲ್ಲುತ್ತವೆ.

## ಬಹುಮಾನಿತ ಪ್ರಶ್ನೆ

ಕುಮಾರ ಚಲವಾದಿ, ಹೊಳೆನರಸಿಪುರ

*ಮನುಷ್ಯ ಜೀವಿಸುವ ಉದ್ದೇಶ ಏನಿರಬಹುದು ರಾಮ್‌ಜಿ?*

ಸಾವಿನ ಭಯ.

ನರಸಿಂಹ ಪೈ, ಕಾಸರಕೋಡ

*ದೇಶದಲ್ಲಿ ಸಾಕಷ್ಟು ವೃದ್ಧರು ಇರುವಾಗಲೂ ‘ಯಂಗ್ ಇಂಡಿಯಾ’ ಎನ್ನುವುದೇಕೆ?*

ಅದು young in dia ಅಂತೆ. ಬೊಜ್ಜಿನ ವೃತ್ತಾಕಾರದಲ್ಲಿ ಭಾರತೀಯರು ವಿದೇಶಿಯರ ಮುಂದೆ ಇನ್ನೂ ಕಿರಿಯರಂತೆ.

ಆರತಿ ಘಟಿಕಾರ್, ದುಬೈ

*ನಸುಕಿನಲ್ಲಿ ಬೆಂಗಳೂರು ಕಸಮುಕ್ತವಾಗಿ ಸಿಂಗಪುರದಂತೆ ಕಂಗೊಳಿಸಿದಂತೆ ಕನಸು ಕಂಡೆ. ಇದರ ಅರ್ಥವೇನು?*

ದುಬೈನ ನಸುಕು ಬೆಂಗಳೂರಿನ ಬ್ರೇಕ್‌ಫಾಸ್ಟ್ ಟೈಮ್ ಆದ್ದರಿಂದ ಅದು ಹಗಲುಗನಸಿನ ಲೆಕ್ಕಕ್ಕೇ ಬರುತ್ತದೆ.

ಜೆ.ಸಿ. ರವಿಕುಮಾರ್, ಜಯಸುವರ್ಣಪುರ

*ಜಾತಿಗಳ ಗೊಂದಲ ವ್ಯವಸ್ಥೆಯಲ್ಲಿ ಅನಾಥ ಮಕ್ಕಳು ಮೀಸಲಾತಿ ಸೌಲಭ್ಯ ಪಡೆಯಲು ಏನು ಮಾಡಬೇಕು?*



ಸ್ಥಳೀಯ ಪುಢಾರಿಯ ಜಾತಿ ನೋಡಿಕೊಂಡು ಅದೇ ಲಾಂಛನವನ್ನು ಹಣೆಗೆ ಏರಿಸಿಕೊಂಡರೆ ಸಾಕು.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

*ಕಾಸಿದ್ರೆ ಕೈಲಾಸ; ಹೆಂಡ ಇದ್ದರೆ?*

ಕೈಲಾಸ್ವಾಸ.

ಯಂ.ಆರ್. ಪವನ್ ಕುಮಾರ್, ಬಳ್ಳಾರಿ

*ನಾರಿ ಮುನಿದರೆ ಮಾರಿ ಎನ್ನುತ್ತಾರೆ. ಗಂಡಸು ಮುನಿದರೆ ಏನು ಮಾಡಬೇಕು?*

ಆ ಮಾರಿಯನ್ನು ಮುಂದೆ ನಿಲ್ಲಿಸಿ; ಕೂಡಲೆ ಪರಾರಿ!

■ ರಾಮ್